ಡೇಟ್ಸ್ ಕೊಡಲು ಹಿಂದೆಮುಂದೆ ನೋಡುವಷ್ಟು ಸಿನಿಮಾಗಳನ್ನು ಒಪ್ಪಿಕೊಂಡುಬಿಟ್ಟಿದ್ದೆ.

◆ **‘ಭುಜಂಗಯ್ಯನ ದಶಾವತಾರ’ ಸಿನಿಮಾದ ನೆನಪುಗಳನ್ನು ಹಂಚಿಕೊಳ್ಳಿ.**

ನಂದು ಯಾವಾಗ್ಲೂ ನಗುನಗ್ತಾ ಇರೋ ಸ್ವಭಾವ. ‘ನೋಡು, ಈ ಸಿನಿಮಾದಲ್ಲಿ ನಿನ್ನದು ಘಾಟಿ ಹೆಂಗಸಿನ ಪಾತ್ರ. ನೀನು ಯಾವ್ದೇ ಕಾರಣಕ್ಕೆ ನಗಬಾರ್ದು’ ಎಂದು ಲೋಕೇಶ್ ಹೇಳಿದ್ದರು. ನಾನು ನಕ್ಕೋತಾನೇ ‘ಆಯ್ತು ಮಾಡ್ತೀನಿ’ ಎಂದಿದ್ದೆ. ನಾನು ಸುಮ್ಮನೆ ನಿಂತರೂ ಎಲ್ಲರಿಗೂ ನಕ್ಕ ಹಾಗೆ ಕಾಣ್ತಿತ್ತಂತೆ. ಎಲ್ಲರೂ, ‘ನಿಮಗೆ ನಗದೆ ಇರೋಕೆ ಸಾಧ್ಯವೇ ಇಲ್ಲ’ ಅಂತಿದ್ದರು. ಸಿನಿಮಾದಲ್ಲಿ ನಾನು ಹಿಂದಿನ ದಿನ ಪಿತೃಪಕ್ಷ ಎಂದು ನನ್ನ ಮಗ ಮನೆಗೆಲ್ಲ ಪೇಂಟ್ ಮಾಡುತ್ತಿದ್ದ. ಇವರೇ ಅಂಗಡಿಗೆ ಹೋಗಿ ಪೇಂಟ್ ತಂದುಕೊಟ್ಟರು. ಮನೆಗೆ ಜನರೆಲ್ಲ ಬಂದಿದ್ದರು. ರಾತ್ರಿ ಸ್ನೇಹಿತರಿಗೆಲ್ಲ ಪಾರ್ಟಿ ಕೊಟ್ಟರು.

ಆಗ ಒಂದು ಕಾಂಪ್ಲೆಕ್ಸ್ ಖರೀದಿಸಿದ್ದೆವು. ಅದರ ರಿಜಿಸ್ಟ್ರೇಷನ್‌ಗೆ ಮರುದಿನ ಹೋಗಬೇಕಾಗಿತ್ತು. ಮರುದಿನ ಬೆಳಿಗ್ಗೆ ‘ನನ್ ಕೈಲಿ ಈವತ್ತು ಹೋಗಕ್ಕಾಗಲ್ಲಪ್ಪಾ, ನಿನ್ನೆ ಅಷ್ಟೊಂದು ಕೆಲಸ ಮಾಡಿದೀನಿ. ಸುಸ್ತಾಗಿದೆ’ ಅಂದರು. ನಾನು ಚಿತ್ರೀಕರಣಕ್ಕೆ ಹೋಗಬೇಕಿತ್ತು. ‘ನಾನು ಚಿತ್ರೀಕರಣಕ್ಕೆ ಹೋಗಿ ಬರ್ತೀನಿ. ಆಮೇಲೆ



ಸಿಟ್ಟಿನಲ್ಲಿ ಬಳೆಗಳನ್ನೆಲ್ಲ ಒಡೆದು ಹಾಕುವ ಒಂದು ದೃಶ್ಯವಿದೆ. ಲೋಕೇಶ್, ‘ಸೀನ್ ಇಷ್ಟೇ ಇರುವುದು. ನೊ ರೀಟೇಕ್. ಅದೇನ್ ಮಾಡ್ತೀಯೋ ನೋಡು’ ಎಂದರು. ನಾನು ಸರಿ ಎಂದು ಹೇಳಿ ಮಾಡಿ ಮುಗಿಸಿದೆ. ಚಿತ್ರೀಕರಣ ನೋಡಲು ಬಂದಿದ್ದ ಹುಡುಗರೆಲ್ಲ ಚಪ್ಪಾಳೆ ತಟ್ಟಿಬಿಟ್ಟರು. ಆ ಸಿನಿಮಾಗೆ ನನಗೆ ರಾಜ್ಯಪ್ರಶಸ್ತಿ ಬಂತು.

ಒಮ್ಮೆ ನಾನು ಲೋಕೇಶ್‌ಗೆ ‘ನಂಗೆ ಕಾಸಿನ ಸರ ಬೇಕು’ ಎಂದು ಪೀಡಿಸ್ತಿದ್ದೆ. ಅವ್ರು ‘ಹೋಗೇ, ಅವಾರ್ಡ್ ಇದ್ಯಲ್ಲಾ, ಅದನ್ನೇ ತಗೊಂಡೋಗಿ ಸರ ಮಾಡಿಸ್ಕೋ’ ಅಂದ್ರು. ನಾನು ತಗೊಂಡೋಗಿ ಕರಗಿಸಿದ್ರೆ ಒಳಗಡೆ ಬೆಳ್ಳಿ ಇತ್ತು. ಮೇಲಿಂದ ಚಿನ್ನದ ಲೇಪನ ಅಷ್ಟೆ. ಪುಣ್ಯಕ್ಕೆ ಈಗ ರಾಜ್ಯೋತ್ಸವ ಪ್ರಶಸ್ತಿಗೆ ಪೂರ್ತಿ ಚಿನ್ನದ ಪದಕ ಕೊಡ್ತಾರೆ. ನಂತರ ‘ಸಿದ್ಲಿಂಗು’ ಚಿತ್ರಕ್ಕೆ ಅತ್ಯುತ್ತಮ ಪೋಷಕನಟಿ ಪ್ರಶಸ್ತಿ ಬಂತು.

◆ **ಲೋಕೇಶ್ ಅವರ ಕೊನೆಯ ದಿನಗಳು ಹೇಗಿದ್ದವು?**

ಹೋಗೋಣ’ ಎಂದೆ. ಆಮೇಲೆ ಅವರಿಗೆ ಎದೆಯಲ್ಲೇನೋ ಹಿಡಿದುಕೊಂಡ ಹಾಗೆ ಆಯಿತು. ಸೃಜನ್ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ. ಡಾಕ್ಟರು, ‘ಮಲ್ಕೊಳ್ಳಿ ಲೋಕೇಶ್, ನೋಡೋಣ’ ಎಂದರು. ಮಲಗಿಕೊಳ್ಳಲು ಹೋಗುತ್ತಿದ್ದ ಹಾಗೆಯೇ ವಾಂತಿ ಆಯ್ತು. ಕೋಮಾಗೆ ಹೋಗಿಬಿಟ್ಟರು. ಅಷ್ಟೆ, ಆಮೇಲೆ ಬರಲೇ ಇಲ್ಲ.

◆ **ನಿಮಗೆ ತುಂಬ ಇಷ್ಟವಾದ ಪಾತ್ರಗಳು ಯಾವುವು?**

‘ಮೋಡದ ಮರೆಯಲ್ಲಿ’ ಸಿನಿಮಾದ ಪಾತ್ರ. ಹಾಗೆಯೇ ಭುಜಂಗಯ್ಯನ ದಶಾವತಾರ ಸಿನಿಮಾದ ಪಾತ್ರ. ಮತ್ತೆ ‘ಸಿದ್ಲಿಂಗು’ ಸಿನಿಮಾದ ಪಾತ್ರ. ಅದರಲ್ಲಿ ನನ್ನದು ಆಯಾ ಪಾತ್ರ. ಅದೇ ಕಾಸ್ಟ್ಯೂಮಲ್ಲಿದ್ದೆ. ಅಲ್ಲೊಬ್ಬಳು ಹೆಣ್ಣುಮಗಳು ನನ್ನನ್ನೇ ದಿಟ್ಟಿಸಿ ನೋಡ್ತಿದ್ದಳು. ಏನು ಎಂಬಂತೆ ಕಣ್ಣನ್ನೆ ಮಾಡಿದೆ. ಅವಳು, ‘ನಿನ್ ಮಗ ನಿನ್ನನ್ನು ಚೆನ್ನಾಗಿ ನೋಡ್ಕೋತಿಲ್ವಾ?’ ಕೇಳಿದಳು. ನನ್ನ ಕಾಸ್ಟ್ಯೂಮ್ ನೋಡಿ ಅವಳಿಗೆ ಆ ಅನುಮಾನ ಬಂದಿತ್ತು.

◆ **ಲೋಕೇಶ್ ಮೆಚ್ಚಿಕೊಂಡಿದ್ದ ನಿಮ್ಮ ಅಭಿನಯದ ಪಾತ್ರಗಳು ಯಾವುವು?**

‘ಭುಜಂಗಯ್ಯನ ದಶಾವತಾರ’, ‘ಒಥೆಲೋ’, ‘ಸಂಕ್ರಾಂತಿ’ ಈ ಮೂರರಲ್ಲಿನೂ ನನ್ನ ಪಾತ್ರ ಅವರಿಗೆ ಇಷ್ಟವಾಗಿತ್ತು. ಆದರೆ ಅವರು ಯಾವತ್ತೂ ಬಾಯಿಬಿಟ್ಟು ಹೇಳಿದವರೇ ಅಲ್ಲ. ‘ನೀನು ಕಲಾವಿದೆಯೇ ಅಲ್ಲ. ಏನೋ ಸಹಜವಾಗಿರ್ತೀಯಾ... ಅದೇ ನಿನ್ ಪ್ಲಸ್ ಪಾಯಿಂಟು’ ಎನ್ನುತ್ತಿದ್ದರು. ಅವರ ಬಾಯಿಯಲ್ಲಿ ಒಳ್ಳೆಯ ಕಲಾವಿದೆ ಅನಿಸಿಕೊಳ್ಳಬೇಕು, ಐ ಲವ್ ಯೂ ಅಂತ ಹೇಳಿಸಿಕೊಳ್ಳಬೇಕು, ಒಮ್ಮೆ ಅವರಿಂದ ಪೆಟ್ಟು ತಿನ್ನಬೇಕು ಎಂದೆಲ್ಲ ನಿರೀಕ್ಷೆ ಇಟ್ಟುಕೊಂಡಿದ್ದೆ. ಆದರೆ ಅವರು ಈ ಯಾವುದನ್ನೂ ಮಾಡಲಿಲ್ಲ.

◆ **ಎಷ್ಟೆಲ್ಲ ಕಷ್ಟಗಳಿದ್ದರೂ ಎಲ್ಲವನ್ನೂ ಸಕಾರಾತ್ಮಕವಾಗಿ ತೆಗೆದುಕೊಂಡು ನಗುನಗುತ್ತಿರುವ ಜೀವನಪ್ರೀತಿ ಉಳಿಸಿಕೊಂಡಿದ್ದು ಹೇಗೆ?**

ಗೊತ್ತಿಲ್ಲ. ನಮ್ಮಮ್ಮ ನಮಗೆ ಹೇಳಿಕೊಟ್ಟಿದ್ದೂ ಅದೇ. ಎಂಥದೇ ಪ್ರಸಂಗ ಬಂದರೂ ಹೇಡಿತನದಿಂದ ಬದುಕಿನಿಂದ ಹಿಂದೆ ಹೋಗುವುದು ತಪ್ಪು ಎಂದು ಹೇಳುತ್ತಿದ್ದರು. ಬಹುಶಃ ಅವರಿಂದಲೇ ನನಗೆ ಈ ಗುಣ ಬಂದಿರಬೇಕು. ಆದರೆ ನಾನು ಅವರಷ್ಟು ಬುದ್ಧಿವಂತೆಯಲ್ಲ. ಅವರಷ್ಟು ಭೇದ ಇಲ್ಲದೆ ತನ್ನ ಮಕ್ಕಳನ್ನೂ ಬೇರೆ ಮಕ್ಕಳನ್ನು ನೋಡುವ ಗುಣ ನನಗೆ ಬಂದಿಲ್ಲ. ನನ್ನ ಮಕ್ಕಳು ಅಂದ್ರೆ ಒಂದು ತುತ್ತು ಜಾಸ್ತಿನೇ ಕೊಡ್ತೀನಿ. ಆದ್ರೆ ನಮ್ಮಮ್ಮ ಹಾಗೆ ಮಾಡ್ತಿರ್ಲಿಲ್ಲ. ಏನೇ ಕೊಟ್ರೂ ಎಲ್ಲರಿಗೂ ಸಮನಾಗಿ ಕೊಡ್ತಿದ್ರು. ಅದೇ ಗುಣ ನನ್ನ ಸೊಸೆಯಲ್ಲಿದೆ. ಅವಳು ಯಾವತ್ತೂ ತನ್ನ ಮಕ್ಕಳಿಗೆ ಜಾಸ್ತಿ ಕೊಟ್ಟು ಬೇರೆಯವರಿಗೆ ಕಡಿಮೆ ಕೊಡಬೇಕು ಎಂದು ಎಣಿಸುವುದೇ ಇಲ್ಲ. ಇಂಥ ಗುಣ ಇಬ್ಬರಲ್ಲೇ ನಾನು ನೋಡಿದ್ದು. ನನ್ನ ತಾಯಿ ಮತ್ತೆ ನನ್ನ ಸೊಸೆ. ನಾನ್ಯಾಕೆ ಹಂಗಿಲ್ಲ ಎಂದು ನನಗೆ ಎಷ್ಟೋ ಸಲ ಅನಿಸುತ್ತದೆ.

ಅಚಾನಕ್ಕಾಗಿ ಈ ಕ್ಷೇತ್ರಕ್ಕೆ ಬಂದೆ. ಇದಕ್ಕೂ ನನಗೂ ಸಂಬಂಧವೇ ಇರಲಿಲ್ಲ. ನನಗೇ ಗೊತ್ತಿಲ್ಲದೆಯೇ ಸಂಬಂಧ ಬೆಸೆಯಿತು. ಇಲ್ಲಿ ನನಗೆ ಏನೂ ಕಡಿಮೆ ಆಗಲಿಲ್ಲ. ಹಾಗೆ ನನ್ನನ್ನು ಈ ಕಲಾಪ್ರಪಂಚ ಸಲಹಿದೆ. ಅದಕ್ಕೆ ನಾನು ಕೃತಜ್ಞತೆ ಸಲ್ಲಿಸಲು ಸಾಧ್ಯ ಅಷ್ಟೆ. ಎಲ್ಲರಿಗೂ ಅದೇ ರೀತಿ ಬದುಕು ಸಿಗಲಿ ಎಂದು ಹಾರೈಸುತ್ತೇನೆ.

***

ಮಾತುಮುಗಿಸಿದ ಗಿರಿಜಾ ಲೋಕೇಶ್ ಮುಖದಲ್ಲಿ, ಟೇಬಲ್ ಮೇಲಿನ ಬುದ್ಧನ ವಿಗ್ರಹದಷ್ಟೇ ಪ್ರಾಂಜಲ ನಗೆಯಿತ್ತು. ಕಣ್ಣುಗಳಲ್ಲಿ ತಮ್ಮ ಹಿಂದಿನ ಬದುಕನ್ನೊಮ್ಮೆ ಸುತ್ತಾಡಿಬಂದ ಹೊಳಪಿತ್ತು. ಮಡಿಲಲ್ಲಿ ಬಂದುಕೂತ ಮೊಮ್ಮಗನನ್ನು ಮುದ್ದುಮಾಡುತ್ತಲೇ ನಮ್ಮನ್ನು ಬೀಳ್ಕೊಟ್ಟರು; ‘ನೂರನೇ ವರ್ಷದ ಸಂಭ್ರಮಕ್ಕೆ ಮತ್ತೆ ಭೇಟಿಯಾಗೋಣ’ ಎಂದು ನಗುತ್ತ.